ದಿನಾಂಕಃ 05-01-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಡಿ ಎಸ್ ಆರ್ ವಕೀಲರಿಂದಃ

ಗವಿಯಪ್ಪರವರಿಗೆ 7-8 ಐಟಂ ಸ್ವತ್ತುಗಳು ಇದ್ದವು. ಸದರಿ ಆಸ್ತಿಗಳು ಐ.ಡಿ ಹಳ್ಳಿ ಹೋಬಳಿ ಯರಗುಂಟೆ, ಚೋಳೇನಹಳ್ಳಿ ಮತ್ತು ಮಧುಗಿರಿಯಲ್ಲಿ ಇದ್ದವು. ಸದರಿ ಸ್ವತ್ತುಗಳು ಗವಿಯಪ್ಪನ ಪಿತ್ರಾರ್ಜಿತ ಸ್ವತ್ತುಗಳು. ಗವಿಯಪ್ಪನಿಗೆ 7-8 ಸ್ವತ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ಗವಿಯಪ್ಪನಿಗೆ ಸರ್ವೆ ನಂ 18 ರಲ್ಲಿ 12 ಗುಂಟೆ, 45/2 ರಲ್ಲಿ 1 ಎಕರೆ 2 ವರೆ ಗುಂಟೆ ಮತ್ತು ಒಂದು ಮನೆ ಮಾತ್ರ ಇತ್ತು ಎಂದರೆ ಸರಿಯಲ್ಲ ಗವಿಯಪ್ಪ ಈ ಮೇಲಿನ 3 ಸ್ವತ್ತುಗಳನ್ನು ತನ್ನ ಮಕ್ಕಳಾದ ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪರವರಿಗೆ ವಿಲ್ ಮೂಲಕ ಬರೆದು ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗವಿಯಪ್ಪನ ಮರಣಾನಂತರ ವಿಲ್ ಪ್ರಕಾರ ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪ ಅವರವರ ಸ್ವತ್ತುಗಳಲ್ಲಿ ಪ್ರತ್ಯೇಕ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಿಲ್ ಪ್ರಕಾರ ಅವರ ಹೆಸರಿಗೆ ಖಾತೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟರಮಣಪ್ಪರವರಿಗೆ ಭಾಗ್ಯಮ್ಮ ಎಂಬ ಮಗಳು ಇದ್ದಳು ವೆಂಕಟರಮಣಪ್ಪ ತಾನು ವಿಲ್ ಮೂಲಕ ಪಡೆದುಕೊಂಡಿದ್ದ ಸ್ವತ್ತುಗಳನ್ನು ಭಾಗ್ಯಮ್ಮರವರಿಗೆ ವಿಲ್ ಬರೆದುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ವೆಂಕಟರಮಣಪ್ಪನ ಮರಣಾನಂತರ ಭಾಗ್ಯಮ್ಮ ವಿಲ್ ಪ್ರಕಾರ ಖಾತೆ ಪಹಣಿ ಮಾಡಿಸಿಕೊಂಡು ಸದರಿ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ

ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಭಾಗ್ಯಮನ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಭಾಗ್ಯಮ್ಮ ದಾವಾ ಐಟಂ ನಂ 4 ರಿಂದ 6 ನೇ ಸ್ವತ್ತುಗಳನ್ನು 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅಂದಿನಿಂದ ಸದರಿ ಸ್ವತ್ತಗಳಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಭಾಗ್ಯಮ್ಮ ಮಾರಾಟ ಮಾಡಿರುವ ದಾವಾ ಐಟಂ ನಂ 4 ರಿಂದ 6 ಸ್ವತ್ತುಗಳಲ್ಲಿ ವಾದಿಯರು ಮತ್ತು ತಿಮ್ಮರಾಯಪ್ಪನ ಮಕ್ಕಳಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯರಿಗೆ ಅನುಕೂಲ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಜಿ ಬಿ ಹೆಚ್ ವಕೀಲರಿಂದ

ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವಂತೆ ನನ್ನನ್ನು ಕೇಳಿಕೊಂಡಿದ್ದಾರೆ ಎಂದರೆ ಸರಿ. ಚಂದ್ರಕಲಾರವರ ತಂದೆಯ ಹೆಸರು ತಿಮ್ಮರಾಯಪ್ಪ. ತಿಮ್ಮರಾಯಪ್ಪರವರಿಗೆ 3 ಜನ ಮಕ್ಕಳು. ವೆಂಕಟರಮಣಪ್ಪನಿಗೆ ಒಬ್ಬ ಸಹೋದರ ಆತನ ಹೆಸರು ತಿಮ್ಮರಾಯಪ್ಪ ಅವರಿಗೆ ಒಬ್ಬಳು ತಂಗಿ ಜಯಮ್ಮ, ಒಬ್ಬಳು ಅಕ್ಕ ವೆಂಕಟಮ್ಮ. ವೆಂಕಟಮ್ಮನ ಗಂಡ ಮತ್ತು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಅವರನ್ನು ಯಾವ ಊರಿಗೆ ಮದುವೆ ಮಾಡಿಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ. ಜಯಮ್ಮನ ಗಂಡ ಮತ್ತು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಅವರು ಯಾವ ಊರಿನಲ್ಲಿ ವಾಸ

ಇದ್ದಾರೆ ನನಗೆ ಗೊತ್ತಿಲ್ಲ. ಗವಿಯಪ್ಪರವರನ್ನು ನಾನು ನೋಡಿದ್ದೇನೆ. ಗವಿಯಪ್ಪ ತೀರಿ ಹೋಗಿ 10 ವರ್ಷ ಆಗಿದೆ. ತಿಮ್ಮರಾಯಪ್ಪ ತೀರಿ ಹೋಗಿ 6-7 ವರ್ಷ ಆಗಿದೆ. ವೆಂಕಟರಮಣಪ್ಪ ತೀರಿ ಹೋಗಿ 5 ವರ್ಷ ಆಗಿದೆ. ಗವಿಯಪ್ಪರವರ ತಂದೆ ಹೆಸರು ತಿಮ್ಮರಾಯಪ್ಪ. ಗವಿಯಪ್ಪರವರಿಗೆ ಮಧುಗಿರಿ ಪಟ್ಟಣದಲ್ಲಿ 6-7 ಸ್ವತ್ತುಗಳು ಇವೆ ಎಂದು ಹೇಳುತ್ತಾರೆ. ಅವುಗಳನ್ನು ನಾನು ನೋಡಿದ್ದೇನೆ. ಯರಗುಂಟೆ ಯಲ್ಲಿರುವ ಸ್ವತ್ತನ್ನು ನೋಡಿದ್ದೇನೆ. ಸರ್ಕಾರಿ ಕಾಲೇಜ್ ಹಿಂಬಾಗ ಇರುವ ಸ್ವತ್ತನ್ನು ನೋಡಿದ್ದೇನೆ. ಸದರಿ ಸ್ವತ್ತಿನ ಸರ್ವೆ ನಂಬರ್, ವಿಸ್ತೀರ್ಣ, ಚಕ್ ಬಂದಿ ಹೇಳಲು ಆಗುವುದಿಲ್ಲ. ತುಮಕೂರು ಗೇಟ್ ನಲ್ಲಿ ಒಂದು ಸ್ವತ್ತು ಇದೆ. ಚೋಳೇನಹಳ್ಳಿ ಕೆರೆ, ಬುರಕನಹಟ್ಟಿಯಲ್ಲಿ, ಸರ್ಕಾರಿ ಹೈಸ್ಕೂಲ್ ಮುಂಭಾಗ ಸ್ವತ್ತುಗಳು ಇವೆ. ಅವುಗಳ ವಿಸ್ತೀರ್ಣ, ಚಕ್ ಬಂದಿ ಗೊತ್ತಿಲ್ಲ. ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪರವರ ಮನೆ ಅಥವಾ ಜಮೀನುಗಳ ಪಕ್ಕ ನನ್ನ ಮನೆ ಅಥವಾ ಜಮೀನುಗಳು ಇಲ್ಲ. ಕಾರಣ ಸದರಿ ಸ್ವತ್ತುಗಳ ಕಡೆಗೆ ಹೋಗುವ ಪ್ರಮಯ ನನಗೆ ಇಲ್ಲ ಎಂದರೆ ಸರಿ. ಕಾರಣ ಯಾವ ಯಾವ ಜಮೀನುಗಳಲ್ಲಿ ಯಾವ ಯಾವ ವರ್ಷ ಯಾವ ಯಾವ ಬೆಳೆಗಳನ್ನು ಯಾರು ಬೆಳೆಯುತ್ತಿದ್ದರು ನನಗೆ ಗೊತ್ತಿಲ್ಲ.

ಗವಿಯಪ್ಪ ಬದುಕಿದ್ದಾಗ ತನ್ನ ಸ್ವತ್ತುಗಳ ಸಂಬಂಧ ಯಾವ ಪತ್ರ ವ್ಯವಹಾರ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಅದೇ ರೀತಿ ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪರವರಿಗೆ ಸೇರಿದ ಸ್ವತ್ತುಗಳ ಸಂಬಂಧ ಅವರು ಮಾಡಿದ ಪತ್ರ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ

ಗವಿಯಪ್ಪರವರಿಗೆ ಹೇಗೆ ಸ್ವತ್ತುಗಳು ಬಂದಿದ್ದವು ನನಗೆ ಗೊತ್ತಿಲ್ಲ. ನನ್ನ ತಾತ ಮುತ್ತಾಂದಿರು ಗವಿಯಪ್ಪನ ಸ್ವತ್ತುಗಳು ಆತನ ಪಿತ್ರಾರ್ಜಿತ ಸ್ವತ್ತುಗಳೆಂದು ಹೇಳಿದ್ದಾರೆ. ದಾವಾ ಸ್ವತ್ತುಗಳು ಗವಿಯಪ್ಪನ ಪಿತ್ರಾರ್ಜಿತ ಸ್ವತ್ತುಗಳು ಎಂಬ ಬಗ್ಗೆ ನಾನು ದಾಖಲಾತಿ ನೋಡಿಲ್ಲ. ಈ ದಾವೆಯನ್ನು ಎಷ್ಟು ಸ್ವತ್ತುಗಳಿಗೆ ಸಲ್ಲಿಸಿದ್ದಾರೆ ನನಗೆ ಗೊತ್ತಿಲ್ಲ. ವಾದಿಯರು ದಾವಾ ಸ್ವತ್ತುಗಳ ಬಗ್ಗೆ ನನಗೆ ಮಾಹಿತಿ ನೀಡಿಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳೆಂದು ವಾದಿಗಳು ನನಗೆ ಹೇಳಿದ ಮೇರೆಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಯಾವ ಸ್ವತ್ತುಗಳು ಪಿತ್ರಾರ್ಜಿತ ಮತ್ತು ಯಾವ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳು ಎಂದು ಸ್ವತ್ತುಗಳನ್ನು ನೋಡಿ ಹೇಳಲು ಆಗುವುದಿಲ್ಲ.

ವೆಂಕಟರಮಣಪ್ಪ ಹೃದಯಾಘತದಿಂದ ಸತ್ತು ಹೋಗಿದ್ದಾರೆ. ಆಸ್ಪತ್ರೆಯಲ್ಲಿ ತೀರಿ ಹೋಗಿದ್ದಾರೆ. ಯಾವ ಆಸ್ಪತ್ರೆ ಎಂದು ಗೊತ್ತಿಲ್ಲ. ವೆಂಕಟರಮಣಪ್ಪನ ಚಿಕಿತ್ಸೆಗೆ ಯಾರು ಎಷ್ಟು ಹಣ ಖರ್ಚು ಮಾಡಿದರು ನನಗೆ ಗೊತ್ತಿಲ್ಲ. ಸರ್ಕಾರಿ ಮಾಧ್ಯಮಿಕ ಶಾಲೆ ಮುಂದೆ ಎರಡು ಮನೆಗಳು ಇವೆ ಎಂದರೆ ಸರಿ. ಆ ಎರಡು ಮನೆಗಳ ಪೈಕಿ ವೆಂಕಟರಮಣಪ್ಪ ಯಾವ ಮನೆಯಲ್ಲಿ ಮತ್ತು ತಿಮ್ಮರಾಯಪ್ಪ ಯಾವ ಮನೆಯಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಒಟ್ಟಿಗೆ ವಾಸ ಇದ್ದರು ಎಂದು ಹೇಳುತ್ತಾರೆ. ಮೊದಲು ಮದರಾಸ್ ಟಾರ್ಸಿ ಮನೆಗಳು ಆಗಿದ್ದವು. ಗೋಡೆ ಮೇಲೆ ತೊಲೆ ಹಾಕಿ ಇಟ್ಟಿಗೆ ಜೋಡಿಸಿ ಗಾರೆ ಹಾಕಿರುತ್ತಾರೆ ಎಂದರೆ ಸರಿ. ಆ ರೀತಿಯ 2 ಮನೆಗಳು ಇದ್ದವು. 1 RCC ಮನೆ ಇತ್ತು. ಸದರಿ ಮನೆಗಳು ಗವಿಯಪ್ಪನ

ಕಾಲದಿಂದ ಬಂದ ಹಳೇ ಮನೆಗಳು.

ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪರವರ ಮನೆಗಳು ಎಲ್ಲಿ ಎಲ್ಲಿ ಇವೆ ಮತ್ತು ಯಾವ ರೀತಿಯ ಮನೆಗಳು ಎಂದು ನನಗೆ ಸರಿಯಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರಾಸಾ–2 ಬುರುಕನಹಟ್ಟಿಯವರು ಎಂದರೆ ಸರಿ. ನ್ಯಾಯಾಲಯಕ್ಕೆ ಬರಬೇಕಾದರೆ ದಾವಾ ಸ್ವತ್ತುಗಳ ಮನೆಗಳನ್ನು ನೋಡಿಕೊಂಡು ಬಂದಿದ್ದೇನೆ. ಗವಿಯಪ್ಪನಿಗೆ ಹೆಂಚಿನ ಮನೆ ಮತ್ತು ಶೀಟಿನ ಮನೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಗವಿಯಪ್ಪನ ಮನೆಯ ಹೆಂಚನ್ನು ತೆಗೆದು RCC ಮಾಡಿದ್ದಾರೆ. ಉಳಿದ ಮನೆಗಳು ಹಳೇ ಮನೆಗಳು ಹಾಗೆಯೇ ಇವೆ. ಗವಿಯಪ್ಪರವರಿಗೆ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇರಲಿಲ್ಲ ಎಂದರೆ ಸರಿಯಲ್ಲ. ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪರವರು ತಮ್ಮ ಜೀವಿತಾವಧಿಯಲ್ಲಿ ಕುಟುಂಬ ವ್ಯವಸ್ಥಾ ಪತ್ರ ಮಾಡಿಕೊಂಡು ಪ್ರತ್ಯೇಕ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ ವೆಂಕಟರಮಣಪ್ಪರವರಿಗೆ ಕ್ಯಾನ್ಸರ್ ರೋಗ ಇದ್ದ ಬಗ್ಗೆ ಮತ್ತು ಕ್ಯಾನ್ಸರ್ ನಿಂದ ಅವರು ತೀರಿ ಹೋದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. 1 ನೇ ವಾದಿ ಹೇಳಿ ಬರೆಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನುಸಹಿ ಮಾಡಿದ್ದೇನೆ ಎಂದರೆ ಸರಿ. ಅವರು ಹೇಳಿದ ಮೇರೆಗೆ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇಲ್ಲ ಮತ್ತು ದಾವಾ ಸ್ವತ್ತುಗಳು ಒಟ್ಟು ಕುಟುಂಬದ

ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿಯರು ಯಾರ ವಿರುದ್ಧ ಸಲ್ಲಿಸಿದ್ದಾರೆ ನನಗೆ ಗೊತ್ತಿಲ್ಲ. ವಾದಿಯರ ಗಂಡಂದಿರ ಬಗ್ಗೆ ಮತ್ತು ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಗವಿಯಪ್ಪ, ವೆಂಕಟರಮಣಪ್ಪ ಮತ್ತು ತಿಮ್ಮರಾಯಪ್ಪರವರ ಮತ್ತು ವಾದಿಯರ ವಂಶದ ಬಗ್ಗೆ ಮತ್ತು ಅವರ ಆಸ್ತಿಗಳ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಹೇಳಿಕೊಟ್ಟ ಸಂಗತಿಗಳನ್ನು ಕಂಠಪಾಠ ಮಾಡಿಕೊಂಡು ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ. ನ್ಯಾ.ನ. ಉ. ಲೇ. ಬೆ. ಮಾ.) ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ .